**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾ.ದಂಃ ರವರ ನ್ಯಾಯಾಲಯ, ವಿರಾಜಪೇಟೆ.**

**ಸಿ.ಸಿ.1013/2013**

| | | |
|---|---|---|
| ಸಾಕ್ಷಿದಾರರ ಹೆಸರು | : ಸಿ. ಹಸ್ಸು | ಪ್ರಾಸಾ-5 |
| ತಂದೆಯ ಹೆಸರು | : ಅಬ್ಬಾಸ್ | ಚಾಸಾ-5 |
| ವಯಸ್ಸು | : 70 ವರ್ಷ | ಪ್ರಮಾಣ ವಚನ ಬೋಧಿಸಲಾದ |
| ಉದ್ಯೋಗ | : ವ್ಯಾಪಾರ | ದಿನಾಂಕಃ 05.08.2026 |
| ವಾಸಸ್ಥಳ | : ಸಿದ್ದಾಪುರ | |

**:ಮುಖ್ಯ ವಿಚಾರಣೆ: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಆರೋಪಿತರ ಪರಿಚಯ ನನಗಿದೆ. 1ನೇ ಆರೋಪಿಯು ಗೈರು ಹಾಜರಿದ್ದು, ಅವರ ಗುರುತಿಸುವಿಕೆಯಲ್ಲಿ ತಕರಾರು ಇಲ್ಲ ಎಂದು ಆರೋಪಿ ಪರ ವಕೀಲರು ತಿಳಿಸುತ್ತಾರೆ. ಚಾಸಾ-1 ಮತ್ತು 6 ರವರ ಪರಿಚಯ ನನಗಿಲ್ಲ.

ಸಾಕ್ಷಿಯು ನಿಪಿ2ರ ಮಹಜರಿನಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದು, ಸದರಿ ಸಹಿಯನ್ನು ನಿಪಿ2(ಸಿ) ಎಂದು ಗುರುತಿಸಲಾಯಿತು.

ಐದಾರು ವರ್ಷದ ಹಿಂದೆ ನಾನು ಹೊಲಮಾಳದಲ್ಲಿರುವ ಮೆಣಸು ಗೋಡೌನ್ ಬಳಿ ನಿಪಿ2ಕ್ಕೆ ಸಹಿ ಮಾಡಿರುತ್ತೇನೆ. ಪೊಲೀಸರ ಕೋರಿಕೆಯಂತೆ ನಿಪಿ2ಕ್ಕೆ ಸಹಿ ಮಾಡಿದ್ದು, ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನಿಪಿ2ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಏನನ್ನು ವಶಕ್ಕೆ ಪಡೆದಿಲ್ಲ. ಎಂ.ಓ 1 ಮತ್ತು 2ನ್ನು ನಾನು ಈ ಹಿಂದೆ ಎಲ್ಲೂ ನೋಡಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪ್ರಾಜ್ಞ್ಯಾ ಸ.ಅ.ಅ. ರವರು ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಿದೆ)

**ಪಾಟೀ ಸವಾಲು: ಪ್ರಾಜ್ಞ್ಯಾ ಸ.ಸ.ಅ. ರವರಿಂದ:**

ಈಗ ಓದಿ ಹೇಳಿದಂತೆ ದಿ.09.09.2012ರಂದು ಚಾಸಾ1ರವರ ಗೋಡೌನ್ ನಲ್ಲಿ 78 ಚೀಲ ಮೆಣಸುಗಳಿಂದ 7 ಚೀಲ ತುಂಬಿಸಿದ ಮೆಣಸನ್ನು ಕಳ್ಳತನ ಮಾಡಿರುವ ಜಾಗ ಇದೆ ಎಂದು ಚಾಸಾ1 ರವರು ಸ್ಥಳ ತೋರಿಸಿದ ಮೇರೆಗೆ ನಿಪಿ2ರ ಮಹಜರನ್ನು ನನ್ನ ಹಾಗೂ ಚಾಸಾ6 ರವರ ಸಮಕ್ಷಮ ಪೊಲೀಸರು ಬರೆದು, ಎಂ.ಓ 1 ಮತ್ತ 2 ರಂತೆ 100 ಗ್ರಾಂ ಮೆಣಸುವುಳ್ಳ ಪ್ಲಾಸ್ಟಿಕ್ ಕವರ್ ಮತ್ತು ಅರ್ಧ ಕೆಜಿಯಷ್ಟು ಮಾದರಿ ಮೆಣಸನ್ನು ವಶಕ್ಕೆ ಪಡೆದಿದ್ದಾರೆ ಎಂದರೆ ಸರಿಯಲ್ಲ.

ನನಗೆ ಪ್ರಕರಣದ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಿದ್ದರೂ ಸಹಾ ಆರೋಪಿತರೂ ನನಗೆ ಪರಿಚಯ ಇರುವ ಕಾರಣ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು: ಆರೋಪಿತರ ಪರ ವಕೀಲರು ಇಲ್ಲ ಎಂದು ತಿಳಿಸಿರುತ್ತಾರೆ.**
**ಮರು ವಿಚಾರಣೆ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿ ಮುದ್ರಿಸಲಾಯಿತು)

ಓ ಹೇ ಕೇ ಸ ಇ ಎ ಒ.,

ಸಹಿ|-
ಸಾಕ್ಷಿ ಸಹಿಃ ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರದನ್ಯಾದಂ., ವಿರಾಜಪೇಟೆ.